SRI QUMURUL ISLAM :— Sir, what Mr. Byregowda has said is correct. The government lands are not available in the villages and the cities, and private land has to be purchased if you have to complete the target. I have taken the meeting of all consultation with, we have already brought to the notice of the government, becuase Deputy Commissioners are responsible to fix the guidance value. Guidance value is nothing but nearer to the market value. They are responsible to fix the registration value. As per the earlier Order, res\gistration value plus 30% was the existing government order. This order is changed now. Now, the government has issued the order to purchase the private land at guidance value plus 20% and there is no difficulty as per the report of the Deputy Commissioners of various districts.

(ಈ ಹಂತದಲ್ಲಿ ಸದಸ್ಯರಾದ ಎಂ. ಚಂದ್ರಪ್ಪನವರು ಪ್ರಶ್ನೆ ಕೇಳಲು ಎದ್ದು ನಿಂತರು)

ಅಧ್ಯಕ್ಷರು :— ಸೋಮವಾರ ಅಥವಾ ಮಂಗಳವಾರ ಇದನ್ನು ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಹಾಕುತ್ತೇನೆ. ಆಗ ನೀವು ಮಾತನಾಡಿ. ಇನ್ನೂ 9 ಪ್ರಶ್ನೆಗಳು ಉಳಿದಿವೆ. ಎಲ್ಲರೂ ಕೇಳುವುದಕ್ಕಾಗುವುದಿಲ್ಲ. ಈಗ ಸದಾನಂದಗೌಡರು ಕೊನೆಯ ಉಪ ಪ್ರಶ್ನೆಯನ್ನು ಕೇಳುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ :— ಈ ಯೋಜನೆಯಲ್ಲಿ ಕಟ್ಟಿದಂಥ ಮನೆಗಳನ್ನು ಇಂಜಿನಿಯರಿಂಗ್ ಡಿವಿಷನ್‌ನವರು ವ್ಯಾಲುಯೇಷನ್ ಮಾಡುವಾಗ 20 ಸಾವಿರಕ್ಕಿಂತ ಹೆಚ್ಚಾದರೆ ಬಿ.ಡಿ.ಓ. ಕಛೇರಿಗಳಲ್ಲಿ ಹಣ ಪಾವತಿ ಮಾಡದೇ ಇರುವಂಥಾದ್ದು ತಮ್ಮ ಗಮನಕ್ಕೆ ಬಂದಿದೆಯೇ? 20 ಸಾವಿರದಲ್ಲೇ ಮನೆ ಕಟ್ಟಬೇಕು. ಅವನು 10 ಸಾವಿರವನ್ನು ಸೇರಿಸಿ ಕಟ್ಟಿದರೆ, ಬಿ.ಡಿ.ಓ. ಕಛೇರಿಗಳಲ್ಲಿ ಇ.ಓ.ಗಳು ದುಡ್ಡನ್ನು ಕೊಡುತ್ತಿಲ್ಲ. ಈಗ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳಿಗೆ ದುಡ್ಡನ್ನು ಕೊಡಲು ಹೇಳಿದ್ದೀರಿ. ಖಂಡಿತವಾಗಿ ಅವರು ಕೊಡುವುದಿಲ್ಲ. ಆ ಬಗ್ಗೆ ತಾವು ಸರ್ಕಾರದಿಂದ ಒಂದು ಸುತ್ತೋಲೆ ಕಳುಹಿಸುತ್ತೀರಾ?

SRI QUMURUL ISLAM :— I have not received any such things. Please bring to my notice, I will take suitable action.

ವಾಯುದಾರರ ಹೆಸರಿನಲ್ಲಿ ಹಕ್ಕು ಬದಲಾವಣೆ.

482(4575) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಗೇಡಂ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕಂದಾಯ ಇಲಾಖೆಯಲ್ಲಿ ಪಟ್ಟೇದಾರ ಮೃತಪಟ್ಟರೆ ವರ್ಷಾನುಗಟ್ಟಲೇ ಅವರ ವಾರಸುದಾರರ ಹೆಸರು ಹಕ್ಕು ಬದಲಾವಣೆಗಾಗಿ ಅರ್ಜಿ ನೀಡಿದರೂ ಸಹ ಹಕ್ಕು ಬದಲಾವಣೆಯಾಗದೇ ಮೃತಪಟ್ಟವನೆ ಸಾಗುವಳಿ ಮಾಡುತ್ತಿದ್ದಾನೆ ಎಂದು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಪಟ್ಟೇದಾರ ಮೃತಪಟ್ಟ ನಂತರ 2-3 ತಿಂಗಳಲ್ಲಿ ಗ್ರಾಮ ಲೆಕ್ಕಪಾಲಕರು ವಾರಸುದಾರರ ಹೆಸರಿನಲ್ಲಿ ಕಾನೂನು ಪ್ರಕಾರ ಕ್ರಮವು ಕೈಗೊಂಡವಾರಸುದಾರರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿ ಅವರ ಸಾಗುವಳಿಯ ಪ್ರಕಾರ ಸಾಗುವಳಿ ಬದಲಾವಣೆ ಮಾಡಬಾರದೇಕೆ?

3. ಈ ವ್ಯವಸ್ಥೆ ಜಾರಿಗೆ ತಂದು ಗ್ರಾಮೀಣ ಬಡ ರೈತರಿಗೆ ತಾಪತ್ರಯ ಇಲ್ಲದಂತೆ ಅನುಕೂಲ ಮಾಡುವುದು ಯಾವಾಗ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :—

1. ಹೌದು. ಕೆಲವು ಪ್ರಕರಣಗಳಲ್ಲಿ.

2. ಕರ್ನಾಟಕ ಭೂ ಕಂದಾಯ ಕಾಯಿದೆ ನಿಯಮಾವಳಿಗಳು, 1966ರ ನಿಯಮ 62ರಡಿಯಲ್ಲಿ ಪಹಣಿ ಇಂದೀಕರಣ ಕಾರ್ಯವನ್ನು ತೀವ್ರವಾಗಿ ಕೈಗೊಳ್ಳಲು ವಿವರವಾದ ಸೂಚನೆಗಳನ್ನು ಸುತ್ತೋಲೆ ಸಂ. ಆರ್‌ಡಿ 42 ಇಎಲ್‌ಆರ್ 2000, ದಿನಾಂಕ 26.05.2000ರಲ್ಲಿ ನೀಡಲಾಗಿದೆ.

3. ಮೇಲ್ಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ :— ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಪ್ರಶ್ನೆಗೆ ಹೌದು, ಕೆಲವು ಪ್ರಕರಣಗಳಲ್ಲಿ ಆಗಿದೆ ಎಂದು ಉತ್ತರ ನೀಡಿದ್ದಾರೆ. ಕೆಲವು ಪ್ರಕರಣಗಳಲ್ಲಿ ಅಲ್ಲಿ, ಬಹುತೇಕ ಪ್ರಕರಣಗಳಲ್ಲಿ ಈ ಪ್ರಕಾರವಾಗಿದೆ. ಪಟ್ಟೇದಾರರು ಮೃತಪಟ್ಟ 10-15-25-35ವರ್ಷಗಳ ನಂತರವೂ ಅವರ ಮಕ್ಕಳ ಹೆಸರಿನಲ್ಲೂ, ವರ್ಗಾವಣೆಯಾಗಿಲ್ಲ, ಅವರ ಮೊಮ್ಮಕ್ಕಳ ಹೆಸರಿಗೂ ಸಹ ವರ್ಗಾವಣೆಯಾಗಿಲ್ಲ. ಉದಾಹರಣೆಗೆ ಹೇಳುವುದಾದರೆ, ಸಣ್ಣಚಿಂತಲಿ, ತಂದೆ-ತಾಯಣ್ಣ, ಸರ್ವೆ ನಂಬರ್-33: 2, ಗ್ರಾಮ-ಇಡ್ಯ, ಇವರು ತೀರಿಕೊಂಡು ಸುಮಾರು 30-35 ವರ್ಷಗಳಾದರೂ ಇಂದಿಗೂ ಪಹಣಿಯಲ್ಲಿ ಇವರೇ ಇದ್ದಾರೆ. ಅವರು ಮೃತಪಟ್ಟ ನಂತರ ಅವರ ಮಕ್ಕಳ ಹೆಸರಿಗೆ ವರ್ಗಾಯಿಸಲು ಅರ್ಜಿಯನ್ನು ಸಲ್ಲಿಸಿದರೂ ಸಹ ಅವರ ಹೆಸರಿಗೆ ವರ್ಗಾವಣೆಯಾಗದೇ ಅವರೂ ವ್ಯೃತಪಟ್ಟಿದ್ದಾರೆ. ಈಗ ಇವರ ಮೊಮ್ಮಕ್ಕಳು ಅರ್ಜಿ ಸಲ್ಲಿಸಿದರೂ ವರ್ಗಾವಣೆಯಾಗಿಲ್ಲ. ಯಲ್ಲಪ್ಪ, ಆಶಣ್ಣ, ಬಾಲಪ್ಪ, ಖಾವಲಿ ಆಶಣ್ಣ, ಲಕ್ಷ್ಮಪ್ಪ ಹೀಗೆ 5-6 ಜನರು ಪರಿಶಿಷ್ಟ ಜಾತಿಯವರಾಗಿದ್ದು ಇದುವರೆಗೂ ಇವರ ಹೆಸರಿನಲ್ಲಿ

ವರ್ಗಾವಣೆಯಾಗಿಲ್ಲ. ಇದರ ವಿವರಗಳನ್ನು ಸದನದ ಮೂಲಕ ಸಚಿವರಿಗೆ ಕಳುಹಿಸುತ್ತಿದ್ದೇನೆ. ಇದರ ಬಗ್ಗೆ ಮುಂದೆ ಕೈಗೊಳ್ಳುವ ಕ್ರಮವೇನು ಎನ್ನುವುದನ್ನು ಹೇಳಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ಇಂಥ ಅನೇಕ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರು ಹೇಳಿದಂತೆ ಬಹಳ ನಿಧಾನವಾಗುತ್ತಿದೆ. ಈ ಬಗ್ಗೆ ಸರ್ಕಾರ ವ್ಯಾಪಕವಾದಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಕ್ಕೆ ಈಗಾಗಲೇ ಸಿದ್ಧತೆಯನ್ನು ಮಾಡುತ್ತಿದೆ. 2000-2001ನೇ ವರ್ಷವನ್ನು ಮೂಲ ದಾಖಲೆಗಳ ವರ್ಷ ಎಂದು ತೀರ್ಮಾನ ಮಾಡಿ ಆರ್.ಟಿ.ಸಿ. ದಾಖಲೆಗಳನ್ನು ಇಂದೀಕರಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಲಾಗಿದೆ. ಆದಷ್ಟು ಜಾಗ್ರತೆ ಎಲ್ಲ ಆರ್.ಟಿ.ಸಿ.ಗಳನ್ನು ಕ್ರಮಬದ್ಧವಾಗಿ ಮಾಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಂಡು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ :— ಎರಡನೆಯ ಪ್ರಶ್ನೆಯ ಉತ್ತರದಲ್ಲಿ ಸರ್ಕಾರ ದಿನಾಂಕ: 26-5-2000ರಲ್ಲಿ ಒಂದು ಸುತ್ತೋಲೆಯನ್ನು ಕಳುಹಿಸಿದೆ ಎಂದು ತಿಳಿಸಿದ್ದಾರೆ. ಸುತ್ತೋಲೆ ಇದ್ದರೂ ಸಹ, ಪಟ್ಟೇದಾರರು ಮೃತಪಟ್ಟು 30-35 ವರ್ಷಗಳಾದರೂ ಇಲ್ಲಿಯವರೆಗೆ ಅವರ ಮಕ್ಕಳ ಹೆಸರಿಗೆ ಏಕೆ ವರ್ಗದವಣೆಗಳೇ, ಅಧಿಕಾರ ವರ್ಗದವಣೆಗಳೇ ವರ್ಗಾವಣೆ ಮಾಡಿಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ. ಪಕ್ಕದ ರಾಜ್ಯದ ಆಂಧ್ರಪ್ರದೇಶದಲ್ಲಿ ಅಧಿಕಾರವರ್ಗದವರೇ ಪ್ರತಿ ಮೂರು ತಿಂಗಳಿಗೊಮ್ಮೆ ಗ್ರಾಮಗಳಿಗೆ ಹೋಗಿ ಆ ಗ್ರಾಮದಲ್ಲಿರುವ ಪಟ್ಟೇದಾರರು ಯಾರಾದರೂ ಮೃತಪಟ್ಟಿದ್ದರೆ, ಅವರ ಹೆಸರಿನಲ್ಲಿ ಇರುವುದನ್ನು ವರ್ಗಾವಣೆ ಮಾಡುವಂಥ ವ್ಯವಸ್ಥೆ ಮಾಡುತ್ತಿದ್ದಾರೆ. ಇದೇ ಪ್ರಕಾರ ನಮ್ಮಲ್ಲೂ ಆಗಬಹುದೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ಸರ್ಕಾರ ಆರ್.ಟಿ.ಸಿ. ದಾಖಲೆಗಳನ್ನು ಅವರವರ ಮನೆ ಬಾಗಿಲಿಗೇ ಒದಗಿಸುವ ವ್ಯವಸ್ಥೆ ಮಾಡುವ ಪ್ರಯತ್ನ ಮಾಡುತ್ತಿದೆ. ಖಂಡಿತವಾಗಿಯೂ ನಾವು ಅದನ್ನು ಮಾಡುತ್ತೇವೆ.

ಚಾಮರಾಜನಗರದಲ್ಲಿ ಹಾಪ್‌ಕಾಮ್ಸ್ ಮಳಿಗೆ.

490(4612) ಶ್ರೀ ಬಿ.ಎನ್.ನುಜುಂಡಸ್ವಾಮಿ (ಕೊಳ್ಳೇಗಾಲ) :— ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಚಾಮರಾಜನಗರ ಜಿಲ್ಲೆಯಲ್ಲಿ ಹಾಪ್‌ಕಾಮ್ಸ್ ಅಂಗಡಿ ಮಳಿಗೆಯನ್ನು ಇದುವರೆಗೆ ತೆರೆಯದೇ ಇರಲು ಕಾರಣವೇನು?

2 ಇದರ ಅವಶ್ಯಕತೆ ಇರುವುದರಿಂದ ಕೂಡಲೇ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :—